

‘ಮದಗಜ’ ಆರ್ಭಟ

# ಅನಿಶ್ಚಿತತೆಯ ಮೋಡದಲ್ಲಿಯೇ ಆಶಾವಾದದ ಮಿಂಚು!




2021 ನನಗಷ್ಟೇ ಅಲ್ಲ, ಎಲ್ಲ ಕಲಾವಿದರಿಗೂ ಸವಾಲಿನದ್ದೇ ಆಗಿತ್ತು. ಸಾಕಷ್ಟು ನಿರೀಕ್ಷೆಗಳೂ ಇದ್ದವು. ನನ್ನ ಹಲವು ಸಿನಿಮಾಗಳು ಈ ವರ್ಷ ರಿಲೀಸ್ ಆಗುವ ನಿರೀಕ್ಷೆಯಲ್ಲಿದ್ದೆ. ಆದರೆ ಈ ವರ್ಷವೂ ಸಾಕಷ್ಟು ಸವಾಲುಗಳನ್ನು ಎದುರಿಸಬೇಕಾಯಿತು. ನಾನು ನಟಿಸಿದ ‘ರಾಬರ್ಟ್’ ಸಿನಿಮಾ ಬಿಡುಗಡೆಯಾಯಿತು. ಅದು ನನ್ನ ವೃತ್ತಿಜೀವನವನ್ನು ಮತ್ತೊಂದು ಲೇವಲ್‌ಗೆ ಕರೆದುಕೊಂಡು ಹೋಯಿತು.

ಈ ವರ್ಷ ಮತ್ತೆ ಎಲ್ಲರೂ ಕೆಲಸ ಮಾಡುತ್ತಿರುವ ಸಮಾಧಾನದಲ್ಲಿದ್ದೆವು. ಆದರೆ ಆದರ ಜೊತೆಗೆ ನಿರ್ಮಾಪಕರು, ನಿರ್ದೇಶಕರು, ಕಲಾವಿದರು ಎಲ್ಲರಿಗೂ ಒಂದು ಭಯವೂ ಇತ್ತು. ಮತ್ತೆ ಲಾಕ್‌ಡೌನ್ ಆಗುತ್ತದೆಯಾ? ಕೊರೊನಾ ಜಾಸ್ತಿ ಆಗುತ್ತದೆಯಾ? ಎಂಬೆಲ್ಲ ಪ್ರಶ್ನೆಗಳು ಕಾಡುತ್ತಿದ್ದವು. ಆ ಭಯದಲ್ಲಿಯೇ ಇಡೀ ವರ್ಷ ಕೆಲಸ ಮಾಡಿದೆವು. ಅದೃಷ್ಟವಶಾತ್ ಹಾಗೆ ಏನೂ ಆಗಲಿಲ್ಲ.

2022ರ ಬಗ್ಗೆ ನಾನು ಸಾಕಷ್ಟು ನಿರೀಕ್ಷೆ ಇಟ್ಟುಕೊಂಡಿದ್ದೇನೆ. ‘ಬನಾರಸ್’ ನನ್ನ ಮೊದಲ ಪ್ಯಾನ್ ಇಂಡಿಯಾ ಸಿನಿಮಾ ಬಿಡುಗಡೆಯಾಗುತ್ತಿದೆ. ಮತ್ತೂ ಎರಡು ಮೂರು ಸಿನಿಮಾಗಳು ಬಿಡುಗಡೆಯಾಗಬೇಕಾಗಿದೆ. ಸಿನಿಮಾ ಹೊರತಾಗಿ ಮತ್ತೇನಾದರೂ ಬ್ಯುಸಿನೆಸ್ ಪ್ರಾರಂಭಿಸುವ ಕನಸೂ ಇದೆ. ಆದರೆ ಈಗ ಮತ್ತೆ ಕೊರೊನಾ ಭಯ ಹೆಚ್ಚುತ್ತಿದೆ. ಏನಾಗುತ್ತದೆಯೋ ಎಂಬ ಆತಂಕ ಮತ್ತೆ ಕಾಡುತ್ತಿದೆ.

ಮೊದಲೆಲ್ಲ ಹೊಸ ವರ್ಷದಲ್ಲಿ ಏನೇನು ಮಾಡಬೇಕು ಎಂಬ ರೆಸಲ್ಯೂಷನ್ ಮಾಡಿಕೊಳ್ಳುತ್ತಿದ್ದೆವು. ಈಗ ಹಾಗೆ ಯೋಚನೆ ಮಾಡಲೂ ಭಯವಾಗುತ್ತದೆ. ಏನಾಗುತ್ತದೆ ಎಂಬ ಖಚಿತತೆಯೇ ಇಲ್ಲವಲ್ಲ. ಆ ಅನಿಶ್ಚಿತತೆಯಲ್ಲಿಯೇ ದಿನಕಳೆಯುತ್ತಿದ್ದೇವೆ. ಹಾಗಾಗಿ ಈ ವರ್ಷ ನಾನು ಏನೂ ರೆಸಲ್ಯೂಷನ್ ಮಾಡದೆ, ಬದುಕು ಎಲ್ಲಿಗೆ ಕೊಂಡೊಯ್ಯುತ್ತದೆಯೋ ಹಾಗೆ ಹೋಗುವುದು ಎಂದು ನಿರ್ಧರಿಸಿಕೊಂಡು ಹೊಸ ವರ್ಷವನ್ನು ಎದುರು ನೋಡುತ್ತಿದ್ದೇನೆ.

**–ಸೋನಲ್ ಮೊಂತೆರಿಯೊ, ನಟಿ**

ದರ್ಬಾರಿನ ಗತವೈಭವವನ್ನು ಮತ್ತೆ ಆರಂಭಿಸುತ್ತದೆ ಎಂಬ ನಿರೀಕ್ಷೆಯಲ್ಲಿಯೇ ಎಲ್ಲರೂ ಕಾಯುತ್ತಿದ್ದರು. ಭರ್ಜರಿ ಪ್ರಚಾರದೊಂದಿಗೆ, ಕರ್ನಾಟಕದುದ್ದಕ್ಕೂ ಫೆ. 19ಕ್ಕೆ ಬಿಡುಗಡೆಯಾದ ಈ ಚಿತ್ರ ತನ್ನ ಮೇಲಿನ ನಿರೀಕ್ಷೆಯನ್ನೇನೂ ಹುಸಿಗೊಳಿಸಲಿಲ್ಲ. ಧ್ರುವ ಆರ್ಭಟಕ್ಕೆ ಬಹುದಿನಗಳಿಂದ ಕಾಯುತ್ತಿದ್ದ ಅವರ ಅಭಿಮಾನಿಗಳು ಚಿತ್ರಮಂದಿರಕ್ಕೆ ಮುತ್ತಿದರು. ಚಿತ್ರಮಂದಿರದ ಎದುರಿನ ‘ಹೌಸ್‌ಫುಲ್ ಬೋರ್ಡ್’ ಹಾಲಿನ ಅಭಿಷೇಕದಲ್ಲಿ ಮಿಂದೆಂದು ಮಿರಮಿರ ಹೊಳೆಯುತ್ತ ನಿಂತಿತು. ಏಕಪರದೆ ಚಿತ್ರಮಂದಿರಗಳ ಮುಂದೆ ಗುಂಪುಗಟ್ಟಿ ನಿಂತ ಜನರ ಗುಂಪನ್ನು ನೋಡಿ ಇಡೀ ಚಂದನವನ ನಿರಾಳ ನಿಟ್ಟುಸಿರು ಬಿಟ್ಟಿದ್ದು ಸುಳ್ಳಲ್ಲ. ಯಾಕೆಂದರೆ ಈ ಚಿತ್ರದ ಗೆಲುವು ಬರೀ ಒಂದು ಚಿತ್ರದ ಗೆಲುವಾಗಿರಲಿಲ್ಲ. ಸರತಿ ಸಾಲಲ್ಲಿ ನಿಂತ ನೂರಾರು ಸಿನಿಮಾಗಳು, ಮುಂದೆ ಬರಲಿರುವ ಸಿನಿಮಾಗಳ ಎಲ್ಲದರ ಭವಿಷ್ಯದ ದಾರಿಗೆ ಅಡ್ಡಗಟ್ಟಿದ್ದ ಬ್ಯಾರಿಕೇಡ್ ಅನ್ನು ಒಡೆದುಹಾಕಲೇಬೇಕಿದ್ದ ಗೆಲುವಾಗಿತ್ತು.

ಚಿತ್ರವಿಮರ್ಶಕರಿಂದ ಅಷ್ಟೇನೂ ಮೆಚ್ಚುಗೆ ಪಡೆದುಕೊಳ್ಳದಿದ್ದರೂ ಮೊದಲ ಎರಡು ವಾರ ಗಲ್ಲಾಪೆಟ್ಟಿಗೆಯಲ್ಲಿ ‘ಪೊಗರು’ ಸದ್ದು ಮಾಡಿದ್ದಂತೂ ನಿಜ. ನಿರ್ಮಾಪಕರ ಮುಖದಲ್ಲಿಯೂ ಇದರಿಂದ ಗೆಲುವಿನ ನಗು ಮೂಡಿತು. ಆದರೆ ಮೂರನೇ ವಾರದಿಂದ ಮತ್ತೆ ಸಂದಣಿ ಕಡಿಮೆಯಾಯಿತು.

## ರಾಬರ್ಟ್‌ನ ಮೆರವಣಿಗೆ

ಒಂದರ ಹಿಂದೆ ಇನ್ನೊಂದು ಸ್ಟಾರ್ ಸಿನಿಮಾ ಬಿಡುಗಡೆಯಾಗಿ ಜನರನ್ನು ಚಿತ್ರಮಂದಿರ ಸಂಸ್ಕೃತಿಗೆ ಮರಳಿ ಕರೆತರುವ ರೀತಿಯ ಸಿನಿಮಾ ಬಿಡುಗಡೆ ವಿನ್ಯಾಸವೊಂದು ತಂತಾನೆಯೇ ರೂಪುಗೊಂಡಿತ್ತು. ಇವುಗಳ ನಡುವೆ ಸಣ್ಣ, ಮಧ್ಯಮ ಬಜೆಟ್ ಸಿನಿಮಾಗಳೂ ನುಸುಳಿ ಪ್ರೇಕ್ಷಕರ ಗಮನ ಸೆಳೆಯಲು ಸಜ್ಜಾಗಿದ್ದವು.

‘ಪೊಗರು’ ಅಬ್ಬರ ಕಡಿಮೆಯಾಗುವಷ್ಟರಲ್ಲಿ ‘ರಾಬರ್ಟ್’ನ ಮೆರವಣಿಗೆ ಸದ್ದು ಮಾಡತೊಡಗಿತ್ತು. ‘ಕಣ್ಣು ಹೊಡಿಯಾಕ...’ ಹಾಡಿನ ಮೂಲಕ ಆಗಲೇ ಸಖತ್ ಪ್ರಚಾರ ಪಡೆದುಕೊಂಡಿದ್ದ, ದರ್ಶನ್ ನಟನೆಯ ಈ ಸಿನಿಮಾ ಬಗ್ಗೆ ಜನರಿಗೆ ಸಾಕಷ್ಟು ನಿರೀಕ್ಷೆ ಇತ್ತು. ಎಂಟರ್‌ಟೈನಿಂಗ್ ಸಿನಿಮಾ ಮಾಡಲು ಸಿದ್ಧಹಸ್ತರಾಗಿರುವ ನಂದಕಿಶೋರ್ ಅವರ ನಿರ್ದೇಶನ ಒಂದು ಕಡೆಯಾದರೆ, ಈ ಚಿತ್ರದಲ್ಲಿ ದರ್ಶನ್ ಹಲವು ಅವತಾರಗಳಲ್ಲಿ ಕಾಣಿಸಿಕೊಂಡಿರುವ ಸೂಚನೆ ಇನ್ನೊಂದು ಕಡೆ. ಅದಕ್ಕೆ ತಕ್ಕ ಹಾಗೆ ನಿರ್ಮಾಪಕ ಉಮಾಪತಿ ಪ್ರಚಾರವನ್ನೂ ಜೋರಾಗಿಯೇ ನಡೆಸಿದ್ದರು.

ಮಾರ್ಚ್ ತಿಂಗಳ 11ಕ್ಕೆ ‘ರಾಬರ್ಟ್’ ಅದ್ದೂರಿಯಾಗಿ ಬಿಡುಗಡೆಯಾಯಿತು. ದರ್ಶನ್ ಕರ್ನಾಟಕದಾದ್ಯಂತ ಪ್ರವಾಸ ಮಾಡಿ, ಪ್ರಚಾರವನ್ನೂ ಮಾಡಿದರು. ‘ರಾಬರ್ಟ್’ ಹೊರಗೆ ಸುದ್ದಿ ಮಾಡಿದಷ್ಟು ಗಲ್ಲಾಪೆಟ್ಟಿಗೆಯ ಒಳಗೆ ಸದ್ದು ಮಾಡಲಿಲ್ಲ ಎಂಬ ಗಾಂಧಿನಗರ ತಜ್ಞರ ಅಭಿಪ್ರಾಯದ ಹೊರತಾಗಿಯೂ ಒಂದಿಷ್ಟು ಜನರನ್ನು ಚಿತ್ರಮಂದಿರಕ್ಕೆ ಕರೆತಂದಿದ್ದಂತೂ ನಿಜ. ಹಾಗೆಯೇ ನಿರ್ಮಾಪಕರ ಜೇಬಿಗೆ ಭರಪೂರ ಅಲ್ಲದಿದ್ದರೂ ‘ಅಲ್ಲಿಗಲ್ಲಿಗೆ’ ಆಗುವಷ್ಟು ದುಡ್ಡಿಗೆ ಮೋಸ ಮಾಡಲಿಲ್ಲ.

## ಕಳೆಗುಂದಿದ ‘ಯುವರತ್ನ’

ಫೆಬ್ರುವರಿಯನ್ನು ಧ್ರುವ ಸರ್ಜಾ ಹೆಗಲಿಗೂ, ಮಾರ್ಚ್ ತಿಂಗಳ ಜವಾಬ್ದಾರಿಯನ್ನು ದರ್ಶನ್ ಹೆಸರಿಗೂ ಬರೆದುಕೊಟ್ಟಿದ್ದ ಚಂದನವನ ಈಗ ಪುನೀತ್ ಕಡೆಗೆ ದೃಷ್ಟಿ ಹೊರಳಿಸಿತ್ತು. ಅದಕ್ಕೆ ಕಾರಣ ‘ಯುವರತ್ನ’.